CCE-III-RR/PR/PF/NSR/NSPR(A)/111/7156

**A**

**ಆಗಸ್ಟ್ 2024 ರ ಪರೀಕ್ಷೆ-3**

**AUGUST 2024 EXAMINATION-3**

ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 12 ]
Total No. of Printed Pages : 12 ]

ಒಟ್ಟು ಪ್ರಶ್ನೆಗಳ ಸಂಖ್ಯೆ : 47 ]
Total No. of Questions : 47 ]

**ಸಂಕೇತ ಸಂಖ್ಯೆ : 96-K**
**Code No. : 96-K**

**CCE RR/PR/PF/ NSR/NSPR**
**FULL SYLLABUS**

Question Paper Serial No.

# ವಿಷಯ : ಅರ್ಥಶಾಸ್ತ್ರ

# Subject : ECONOMICS

**(ಕನ್ನಡ ಮಾಧ್ಯಮ / Kannada Medium)**

**(ಶಾಲಾ ಪುನರಾವರ್ತಿತ ಅಭ್ಯರ್ಥಿ / ಖಾಸಗಿ ಪುನರಾವರ್ತಿತ ಅಭ್ಯರ್ಥಿ / ಖಾಸಗಿ ಅಭ್ಯರ್ಥಿ / ಎನ್.ಎಸ್.ಆರ್. / ಎನ್.ಎಸ್.ಪಿ.ಆರ್.)**

**(Regular Repeater / Private Repeater / Private Fresh / NSR / NSPR)**

ದಿನಾಂಕ : 09. 08. 2024 ] [ Date : 09. 08. 2024
ಸಮಯ : ಬೆಳಗ್ಗೆ 10-15 ರಿಂದ ಮಧ್ಯಾಹ್ನ 1-30 ರವರೆಗೆ ] [ Time : 10-15 A.M. to 1-30 P.M.
ಗರಿಷ್ಠ ಅಂಕಗಳು : 80 ] [ Max. Marks : 80

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

**Cut here/ಇಲ್ಲಿ ಕತ್ತರಿಸಿ**

1. ಈ ಪ್ರಶ್ನೆಪತ್ರಿಕೆಯು ಒಟ್ಟು 47 ಪ್ರಶ್ನೆಗಳನ್ನು ಹೊಂದಿದೆ.
2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ***ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ (ಬಾಣವನ್ನು ಅನುಸರಿಸಿ), ಎಡಬದಿ ಪಾರ್ಶ್ವವನ್ನು ಕತ್ತರಿಸಬೇಡಿ.*** ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.
6. ನಿಮಗೆ ವಿತರಿಸಲಾಗಿರುವ ಪ್ರಶ್ನೆಪತ್ರಿಕೆಯ ಆವೃತ್ತಿ ( Version ) ಮತ್ತು ನಿಮ್ಮ ಪ್ರವೇಶ ಪತ್ರದಲ್ಲಿ ಮುದ್ರಿತವಾಗಿರುವ ಪ್ರಶ್ನೆಪತ್ರಿಕೆಯ ಆವೃತ್ತಿ ಒಂದೇ ಆಗಿರುವುದನ್ನು ಖಾತರಿಪಡಿಸಿಕೊಳ್ಳಿ.

ಇಲ್ಲಿಂದ ಕತ್ತರಿಸಿ

**09. 08. 2024**

**TEAR HERE TO OPEN THE QUESTION PAPER**
ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

**Tear here**

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ :**

**10 × 1 = 10**

1. ಭಾರತದಲ್ಲಿ ಹಣಕಾಸಿನ ಕ್ಷೇತ್ರದ ಅಭಿವೃದ್ಧಿ ಮತ್ತು ಬ್ಯಾಂಕುಗಳು ವಿಸ್ತರಣೆಯಾಗಲು ಕಾರಣ

   (A) ಬ್ಯಾಂಕುಗಳ ರಾಷ್ಟ್ರೀಕರಣ

   (B) ಬ್ಯಾಂಕುಗಳ ಖಾಸಗೀಕರಣ

   (C) ಬ್ಯಾಂಕುಗಳ ವಾಣಿಜ್ಯೀಕರಣ

   (D) ಬ್ಯಾಂಕುಗಳ ಕೇಂದ್ರೀಕರಣ

2. ಇವುಗಳಲ್ಲಿ ಬರಿದಾಗದ ಸಂಪನ್ಮೂಲ

   (A) ತೈಲ

   (B) ಖನಿಜಗಳು

   (C) ಸೌರಶಕ್ತಿ

   (D) ನೈಸರ್ಗಿಕ ಅನಿಲ

3. ಬಿಟುಮಿನಾಸ್ ಒಂದು

(A) ಕಬ್ಬಿಣದ ಅದಿರಿನ ವಿಧ

(B) ಕಲ್ಲಿದ್ದಲಿನ ವಿಧ

(C) ಮ್ಯಾಂಗನೀಸ್ ಅದಿರಿನ ವಿಧ

(D) ಅಭ್ರಕದ ವಿಧ

4. ಭಾರತದಲ್ಲಿ ಅತ್ಯಂತ ಕಡಿಮೆ ಜನಸಾಂದ್ರತೆ ಹೊಂದಿರುವ ರಾಜ್ಯ

(A) ಹಿಮಾಚಲ ಪ್ರದೇಶ

(B) ಮಧ್ಯಪ್ರದೇಶ

(C) ಉತ್ತರ ಪ್ರದೇಶ

(D) ಅರುಣಾಚಲ ಪ್ರದೇಶ

5. ಸಾಂಸ್ಥಿಕೇತರ ಹಣಕಾಸಿನ ಮೂಲಕ್ಕೆ ಉದಾಹರಣೆಯಾಗಿರುವುದು

(A) ವ್ಯಾಪಾರಿಗಳು

(B) ವಾಣಿಜ್ಯ ಬ್ಯಾಂಕುಗಳು

(C) ಪ್ರಾದೇಶಿಕ ಬ್ಯಾಂಕುಗಳು

(D) ಸಹಕಾರಿ ಬ್ಯಾಂಕುಗಳು

6. ಜೀತ ಪದ್ಧತಿ ನಿರ್ಮೂಲನೆಯ ಕಾಯಿದೆಯನ್ನು ಜಾರಿಗೆ ತಂದ ವರ್ಷ

(A) 1966

(B) 1976

(C) 1986

(D) 1996

7. ಸಮುದಾಯ ಅಭಿವೃದ್ಧಿ ಯೋಜನೆ ಜಾರಿಗೆ ತಂದದ್ದು

(A) ಗ್ರಾಮೀಣ ಪ್ರದೇಶಗಳಿಗೆ ಉದ್ಯೋಗ ನೀಡಲು

(B) ಗ್ರಾಮೀಣ ಪ್ರದೇಶಗಳಿಗೆ ಗೃಹ ನಿರ್ಮಿಸಲು

(C) ಗ್ರಾಮೀಣ ಪ್ರದೇಶಗಳಿಗೆ ಆಹಾರ ಒದಗಿಸಲು

(D) ಗ್ರಾಮೀಣ ಪ್ರದೇಶಗಳ ಒಟ್ಟಾರೆ ಅಭಿವೃದ್ಧಿಗಾಗಿ

8. ಭಾರತದಲ್ಲಿ ಮೊದಲ ರೈಲು ಮಾರ್ಗ ನಿರ್ಮಿಸಿದ್ದು,

(A) ಕಲ್ಕತ್ತಾ ಮತ್ತು ರಾಣಿಗಂಜ್ ನಡುವೆ

(B) ಮದ್ರಾಸ್ ಮತ್ತು ಅರಕೋಣಮ್ ನಡುವೆ

(C) ಬಾಂಬೆ ಮತ್ತು ಥಾಣೆ ನಡುವೆ

(D) ಬೆಂಗಳೂರು ಮತ್ತು ಮದ್ರಾಸ್ ನಡುವೆ

9. ಬಕಿಂಗ್ ಹ್ಯಾಮ್ ಕಾಲುವೆ ಇರುವುದು

(A) ತಮಿಳುನಾಡಿನಲ್ಲಿ

(B) ಮುಂಬೈನಲ್ಲಿ

(C) ಗೋವಾದಲ್ಲಿ

(D) ಕೇರಳದಲ್ಲಿ

10. ಪ್ರಪಂಚದಲ್ಲಿನ ಪ್ರಾಚೀನ ಕೇಂದ್ರ ಬ್ಯಾಂಕ್

(A) ಬ್ಯಾಂಕ್ ಆಫ್ ಫ್ರಾನ್ಸ್

(B) ಬ್ಯಾಂಕ್ ಆಫ್ ಜಪಾನ್

(C) ರಿಕ್ಸ್ ಬ್ಯಾಂಕ್

(D) ಬ್ಯಾಂಕ್ ಆಫ್ ನೆದರ್‌ಲ್ಯಾಂಡ್

**II.** 11. ***A*-ಪಟ್ಟಿಯನ್ನು *B*-ಪಟ್ಟಿಯೊಂದಿಗೆ ಹೊಂದಿಸಿ, ಉತ್ತರವನ್ನು ಕ್ರಮಾಕ್ಷರದೊಂದಿಗೆ ಬರೆಯಿರಿ :** **5 × 1 = 5**

| ***A*-ಪಟ್ಟಿ** | ***B*-ಪಟ್ಟಿ** |
|---|---|
| (A) ಜಮೀನ್ದಾರಿ ಪದ್ಧತಿ | (i) ಪ್ರೊ. ನಾರ್ಮನ್ ಬೋರ್ಲಾಗ್ |
| (B) ರೈತವಾರಿ ಪದ್ಧತಿ | (ii) ಮದ್ರಾಸ್ ರಾಜ್ಯ |
| (C) ಜಮೀನ್ದಾರಿ ಪದ್ಧತಿಯನ್ನು ನಿರ್ಮೂಲನೆಗೊಳಿಸಿದ ಮೊದಲ ರಾಜ್ಯ | (iii) ಕಾರ್ನ್‌ವಾಲೀಸ್ |
| (D) ಹಸಿರು ಕ್ರಾಂತಿ | (iv) ಪಶ್ಚಿಮ ಬಂಗಾಳ |
| (E) ಜಮೀನ್ದಾರಿ ಪದ್ಧತಿಯನ್ನು ನಿರ್ಮೂಲನೆಗೊಳಿಸಿದ ಕಡೆಯ ರಾಜ್ಯ | (v) ಥಾಮಸ್ ಮುನ್ರೋ |
| | (vi) ವಿಲಿಯಂ ಬೆಂಟಿಂಕ್ |
| | (vii) ಕರ್ನಾಟಕ |

**III. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :** **15 × 1 = 15**

12. ಬಡತನ ಎಂದರೇನು ?

13. ಅಣು ವಿದ್ಯುತ್ ಉತ್ಪಾದಿಸಲು ಯಾವ ಪರಮಾಣುಗಳನ್ನು ಬಳಸಲಾಗುತ್ತದೆ ?

14. ಕಪ್ಪು ವಜ್ರ ಎಂದು ಯಾವುದನ್ನು ಕರೆಯಲಾಗಿದೆ ?

15. ಕುಟುಂಬ ಯೋಜನೆ ಎಂದರೇನು ?

16. ಭಾರತದಲ್ಲಿ ಕೃಷಿ ಹಣಕಾಸಿನ ಅತ್ಯುನ್ನತ ಬ್ಯಾಂಕು ಯಾವುದು ?

17. ವ್ಯಾಪಾರ ಎಂದರೇನು ?

18. ಅಭಿವೃದ್ಧಿ ಎಂದರೇನು ?

19. ಸಾರ್ವಜನಿಕ ಸಾರಿಗೆ ವ್ಯವಸ್ಥೆಯಲ್ಲಿ ಸಾಂದ್ರೀಕೃತ ನೈಸರ್ಗಿಕ ಅನಿಲವನ್ನು ಬಳಸಲು ಕಾರಣವೇನು ?

20. ಜನಸಾಂದ್ರತೆ ಎಂದರೇನು ?

21. ಕನಿಷ್ಠ ವೇತನ ಕಾಯಿದೆಯನ್ನು ಏಕೆ ಜಾರಿಗೆ ತರಲಾಗಿದೆ ?

22. ಜೀವನದ ಅವಶ್ಯಕ ವಸ್ತುಗಳು ಯಾವುವು ?

23. 1990 ರ ಮುಕ್ತ ವಾಯುನೀತಿಯ ಪರಿಣಾಮವೇನು ?

24. ವಿದೇಶಿ ವಿನಿಮಯ ಎಂದರೇನು ?

25. ಇತ್ತೀಚಿನ ವರ್ಷಗಳಲ್ಲಿ ಭಾರತವು ಸೇವೆಗಳ ರಫ್ತಿನಲ್ಲಿ ಪ್ರಮುಖ ದೇಶವಾಗಿ ಹೊರಹೊಮ್ಮಿದೆ. ಏಕೆ ?

26. ದೇಶೀಯ ವ್ಯಾಪಾರ ಎಂದರೇನು ?

**IV. ಈ ಕೆಳಗಿನ ಪ್ರಶ್ನೆಗಳಿಗೆ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ :**

**14 × 2 = 28**

27. ಫೆರಾನ ಉದ್ದೇಶಗಳು ಯಾವುವು ?

28. ಭಾರತದ ಜೀತ ಕಾರ್ಮಿಕರಿಗೆ ಯಾವ ಹೆಸರುಗಳನ್ನು ನೀಡಲಾಗಿದೆ ?

29. ರಸ್ತೆ ಸಾರಿಗೆ ಸಮಸ್ಯೆಗಳು ಯವುವು ?

30. ಭಾರತೀಯ ರಿಸರ್ವ್ ಬ್ಯಾಂಕಿನ ಪ್ರಾದೇಶಿಕ ಕೇಂದ್ರ ಕಛೇರಿಗಳನ್ನು ಎಲ್ಲಿ ಸ್ಥಾಪಿಸಲಾಗಿದೆ ?

31. ಮಾನವ ಅಭಿವೃದ್ಧಿ ಸೂಚ್ಯಂಕದ ಮಾನದಂಡಗಳನ್ನು ಹೆಸರಿಸಿ.

32. ಭಾರತದ ಯಾವುದಾದರೂ ಎರಡು ಅಣುವಿದ್ಯುತ್ ಕೇಂದ್ರಗಳನ್ನು ತಿಳಿಸಿ.

33. ಭಾರತದಲ್ಲಿ ಮಾನವಶಕ್ತಿ ಯೋಜನೆಯು ಏಕೆ ಪ್ರಮುಖವಾದದ್ದು ?

34. ಲೇವಾದೇವಿಗಾರರು ಗ್ರಾಮೀಣ ಭಾಗಗಳಲ್ಲಿ ಏಕೆ ಪ್ರಸಿದ್ಧರಾಗಿದ್ದಾರೆ ?

35. ನಿರಪೇಕ್ಷ ಬಡತನ ಮತ್ತು ಸಾಪೇಕ್ಷ ಬಡತನದ ನಡುವಿನ ವ್ಯತ್ಯಾಸವೇನು ?

36. ಭಾರತೀಯ ರಿಸರ್ವ್ ಬ್ಯಾಂಕ್ ಹೇಗೆ ಹಣಕಾಸು ವ್ಯವಸ್ಥೆಯನ್ನು ನಿಯಂತ್ರಿಸುತ್ತದೆ ?

37. ಆಫ್ರಿಕಾದ ಕೆಲವು ದೇಶಗಳಲ್ಲಿ ಬಡತನದ ತೀವ್ರತೆ ಹೆಚ್ಚಿದೆ. ಏಕೆ ?

38. 1991 ರ ಹೊಸ ಕೈಗಾರಿಕಾ ನೀತಿಯನ್ನು ಏಕೆ ಜಾರಿಗೊಳಿಸಲಾಯಿತು ?

39. ಭಾರತದಲ್ಲಿ ಬಂದರು ಅಭಿವೃದ್ಧಿ ಇಲಾಖೆಯನ್ನು ಏಕೆ ಸ್ಥಾಪಿಸಲಾಗಿದೆ ?

40. ಭಾರತೀಯ ರಿಸರ್ವ್ ಬ್ಯಾಂಕ್ ಕ್ರಮಬದ್ಧವಾದ ವಿದೇಶಿ ವಿನಿಮಯ ನಿರ್ವಹಣೆಯನ್ನು ಹೇಗೆ ಉತ್ತೇಜಿಸುತ್ತದೆ ?

**V. ಈ ಕೆಳಗಿನ ಪ್ರಶ್ನೆಗಳಿಗೆ ಮೂರರಿಂದ ಆರು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ :**

**$6 \times 3 = 18$**

41. ಭಾರತದಲ್ಲಿ ಜನಸಾಂದ್ರತೆಯನ್ನು ಪ್ರಭಾವಿಸುವ ಅಂಶಗಳು ಯಾವುವು ?

42. ಭಾರತದ ಹಸಿರು ಕ್ರಾಂತಿಯ ಪ್ರಯೋಜನಗಳನ್ನು ತಿಳಿಸಿ.

43. ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯ ಉದ್ದೇಶಗಳು ಯಾವುವು ?

44. ಕೃಷಿ ಹಣಕಾಸಿನ ಅಗತ್ಯವಿದೆ. ಏಕೆ ?

45. ಭಾರತದ ಆಮದುಗಳನ್ನು ಪಟ್ಟಿ ಮಾಡಿ.

46. ಕೃಷಿ ಕಾರ್ಮಿಕರ ಆರ್ಥಿಕ ಸ್ಥಾನಮಾನಗಳು ತೃಪ್ತಿದಾಯಕವಾಗಿಲ್ಲ. ಏಕೆ ?

**VI. ಈ ಪ್ರಶ್ನೆಗೆ ಎಂಟು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ : 1 × 4 = 4**

47. ಸಣ್ಣ ಕೈಗಾರಿಕೆಗಳ ಸಮಸ್ಯೆಗಳು ಯಾವುವು ?

DO NOT WRITE ANYTHING HERE